ಓ ಎಸ್ ನಂಃ 163/2020

ಪಿ. ಡಬ್ಲ್ಯೂ ಃ 1

ದಿಃ 31.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಎನ್  ವಕೀಲರಿಂದ

ನಮ್ಮ ಕುಟುಂಬದ ವಂಶವೃಕ್ಷವಿರುವ ಪ್ರಮಾಣಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 1 ಎಂದು, ನಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 2 ಎಂದು, ಭೂ ನ್ಯಾಯ ಮಂಡಳಿ ಮಾಗಡಿ ಇವರ ಆದೇಶಪುಟದ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 3 ಎಂದು, ಅವರು ಕೊಟ್ಟ 3 ಹಿಂಬರಹಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 4 ರಿಂದ ನಿ ಪಿ 6 ಎಂದು, ದಿನಾಂಕಃ 27.10.1999 ರ ವಿಭಾಗಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 7 ಎಂದು, 11 ಇ ಸ್ಕೆಚ್ ನ್ನು ಕೊಟ್ಟಿದ್ದು ಅದನ್ನು ನಿ ಪಿ 8 ಎಂದು, ಆಕಾರ್ ಬಂದ್ ನ್ನು ಕೊಟ್ಟಿದ್ದು ಅದನ್ನು ನಿ ಪಿ 9 ಎಂದು, ಓ ಎಸ್ 122/2014 ಲ್ಲಿ ಆದ ಆದೇಶದ ವಿರುದ್ದ ಆರ್ ಎಫ್ ಎ 376/2016 ಎನ್ನುವ ಆಪೀಲು ಮಾಡಿದ್ದು ಅದರ ಅಪೀಲು ಮೊಮೇವನ್ನು ಕೊಟ್ಟಿದ್ದು ಅದನ್ನು ನಿ ಪಿ 10 ಎಂದು, ಆರ್ ಎ 56/2016 ರಲ್ಲಿ ಆದ ರಾಜಿ ಅರ್ಜಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 11 ಎಂದು, ಅದರಲ್ಲಿ ತಿದ್ದುಪಡಿ ಮಾಡಿದ ರಾಜಿ ಅರ್ಜಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 12 ಎಂದು, ಅಂತಿಮ ಡಿಕ್ರಿ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 13 ಎಂದು, ಆರ್ ಎ 524/2016-17 ಇದರಲ್ಲಿನ ಆದೇಶದ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 14 ಎಂದು, ದಾವಾ ಸ್ವತ್ತಿನ ಎರಡು ಕೈ ಬರಹದ ಆರ್ ಟಿ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 15 ಮತ್ತು 16 ಎಂದು, ಗಣಕೀಕೃತ ಆರ್ ಟಿ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 17 ಮತ್ತು ನಿ ಪಿ 18 ಎಂದು ಎಂ ಆರ್ ಟಿ 58 ಇದರ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 19 ಎಂದು, ತಹಶೀಲ್ದಾರ್ ಮಾಗಡಿ ಇವರು ಕೊಟ್ಟ ಒಂದು ಹಿಂಬರಹವನ್ನು ಕೊಟ್ಟಿದ್ದು ಅದನ್ನು ನಿ ಪಿ 20 ಎಂದು, ಗ್ರಾಮ ಲೆಕ್ಕಾಧಿಕಾರಿಗಳ ವರದಿಯ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 21 ಎಂದು, ಒಂದು ಪಂಚನಾಮೆಯನ್ನು ಕೊಟ್ಟಿದ್ದು ಅದನ್ನು ನಿ ಪಿ 22 ಎಂದು, ನಾನು ಕೊಟ್ಟ ದೂರಿಗೆ ಪೊಲೀಸರು ಕೊಟ್ಟ ಹಿಂಬರಹವನ್ನು ಕೊಟ್ಟಿದ್ದು ಅದನ್ನು ನಿ ಪಿ 23 ಎಂದು, ಅದರಲ್ಲಿ ಚಿಕ್ಕಮುದ್ದಯ್ಯ ಹಾಗೂ ಇತರರು ಕೊಟ್ಟ ಹೇಳಿಕೆ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 24 ಎಂದು, ಒಂದು ಕೈ ಬರಹದ ಅರ್ ಟಿ ಸಿ ಯನ್ನು ಕೊಟ್ಟಿದ್ದು ಅದನ್ನು ನಿ ಪಿ 25 ಎಂದು, ಎರಡು ಗಣಕೀಕೃತ ಆರ್ ಟಿ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 26 ಮತ್ತು ನಿ ಪಿ 27 ಎಂದು ಗುರುತಿಸಲಾಯಿತು. ದಾವೆಯಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

ಪ್ರತಿವಾದಿಗಳು ಪ್ರತಿವಾದಪತ್ರ ಹಾಕದ ಕಾರಣ ಮತ್ತು ಪ್ರತಿವಾದಿಗಳ ಪರ ವಕೀಲರು ಗೈರುಹಾಜರಾಗಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.